

## ಅಪ್ಪನ ರಕ್ತ

ನನ್ನ ಚಿಕ್ಕ ಮಗಳು ಎಲ್‌ಕೆಜಿ ಓದುತ್ತಿದ್ದಾಗ ಶಾಲೆಯ ಡೈರಿಯಲ್ಲಿ ಮಕ್ಕಳ ಬಗ್ಗೆ ಮಾಹಿತಿ ತುಂಬಿಸಿಕೊಡಲು ಹೇಳಿದ್ದರು. ಸರಿ, ನಾನು ಡೈರಿಯಲ್ಲಿ ಅವಳ ಹೆಸರು, ತರಗತಿ, ಅಪ್ಪನ ಹೆಸರು, ವಿಳಾಸ ಇತ್ಯಾದಿಗಳನ್ನು ತುಂಬುತ್ತಿದ್ದೆ. ಪಕ್ಕದಲ್ಲಿ ಕುಳಿತು, ಪ್ರತಿಯೊಂದನ್ನು ಗಮನಿಸುತ್ತಾ ಅದೇನು? ಇದೇನು? ಎಂದು ಕೇಳುತ್ತಿದ್ದವಳಿಗೆ ಎಲ್ಲವನ್ನು ವಿವರಿಸುತ್ತಿದ್ದೆ. ಒಂದು ಕಡೆ 'ಬ್ಲಡ್ ಗ್ರೂಪ್'ನ ಬಗ್ಗೆ ಮಾಹಿತಿ ಕೇಳಿದ್ದರು. ಅವಳದು O+ve ಆಗಿದ್ದರಿಂದ O+ve ಎಂದು ಬರೆದೆ. ಆಗ ಅವಳು 'ಅಮ್ಮ, ಏನು ಅದು?' ಅಂತ ಮುದ್ದಾಗಿ ಕೇಳಿದಳು. ನಾನವಳಿಗೆ ಪ್ರತಿಯೊಬ್ಬರಿಗೂ ರಕ್ತದ ಪ್ರತ್ಯೇಕ ಗುಂಪುಗಳಿರುವುದನ್ನು ಅವಳಿಗೆ ಅರ್ಥವಾಗುವಂತೆ ತಿಳಿಸಿದೆ. ಆಗವಳು 'ಅಪ್ಪಂದು ಯಾವ ಗ್ರೂಪು? ಎಂದು ಕೇಳಿದಳು. ನಾನು ಅಪ್ಪಂದು O+ve ಎಂದೆ. ಅದಕ್ಕವಳು 'ನಿಂದು?' ಎಂದಳು. ನಾನು ನಂದು 'A+ve' ಅಂದೆ. ಏನೋ ಲೆಕ್ಕಾಚಾರ ಹಾಕುವವಳಂತೆ ಅವಳು ನನ್ನೆಡೆಗೆ ತಿರುಗಿ 'ಅಮ್ಮ, ನಾನು ಬಂದಿದ್ದು ನಿನ್ನ ಹೊಟ್ಟೆಯಿಂದ ಅಂದಿದ್ದೆ ಮತ್ತೆ ನಾನು ಅಪ್ಪನ ರಕ್ತದ ಗ್ರೂಪು ಹೇಗೆ ಕುಡಿದುಬಿಟ್ಟೆ?' ಎಂದಾಗ ನನಗೆ ನಗು ತಡೆಯಲಾಗಲಿಲ್ಲ!

**ರೂಪಾ ಸಂದೀಪ್, ಬೆಂಗಳೂರು**

## ಅದನ್ನು ಬಿಟ್ಟರೆ...

ನಮ್ಮ ಬ್ಯಾಂಕ್ ಶಾಖೆಯ ಎದುರು ಅಂಗಡಿ ಇಟ್ಟಿರುವ ಶ್ರೀಧರ ಹಾಸ್ಯ ಪ್ರವೃತ್ತಿಯ ಹುಡುಗ. ಒಮ್ಮೆ ಒಬ್ಬ ತರಲೆ ಗಿರಾಕಿ ಅವನ ಅಂಗಡಿಗೆ ಬಂದ. ಅವರಿಬ್ಬರ ಪ್ರಶ್ನೋತ್ತರ ಹೀಗಿತ್ತು:

ಗಿರಾಕಿ: ಕುಡಿಯೋಕೆ ಬೇಕು. ಎಳನೀರು ಇದೆಯಾ?

ಶ್ರೀಧರ: ಹೂಂ ಇದೆ.

ಗಿರಾಕಿ: ಅದು ಬಿಟ್ರೆ...

ಶ್ರೀಧರ: ಕೋಕಂ ಇದೆ.

ಗಿರಾಕಿ: ಬೇಡ, ಅದು ಬಿಟ್ರೆ...

ಶ್ರೀಧರ: ಕಲ್ಲಂಗಡಿ ಹಣ್ಣಿನ ಜ್ಯೂಸ್ ಇದೆ, ಕೊಡ್ಲಾ?

ಗಿರಾಕಿ: ಬೇಡ, ಅದು ಬಿಟ್ರೆ...

ಶ್ರೀಧರ: ತಂಪಾದ ಮಜ್ಜಿಗೆ ಇದೆ.

ಗಿರಾಕಿ: ಅದು ಬಿಟ್ರೆ...

ಶ್ರೀಧರನಿಗೆ ಇಷ್ಟು ಹೊತ್ತಿಗೆ ರೇಗಿ ಹೋಗಿತ್ತು. 'ಸೋಪಿನ ನೀರು, ಫಿನಾಯ್ಲು ಇದೆ. ಯಾವುದನ್ನು ಕುಡಿಯುತ್ತೀರಿ...' ಅಂದ. ಅಷ್ಟರಲ್ಲಿ ಗಿರಾಕಿ ನಾಪತ್ತೆಯಾಗಿದ್ದ!

**ಕೆ.ಪಿ. ಸತ್ಯನಾರಾಯಣ, ಹಾಸನ**





ಚಿತ್ರಗಳು: ಗಣೇಶ ಆಚಾರ್ಯ